ದಿಃ 03.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಜಿ.ಬಿ.ವಿ., ವಕೀಲರಿಂದ ಪ್ರತಿವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 24.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಜಿ.ಬಿ.ವಿ., ವಕೀಲರಿಂದ ಪ್ರತಿವಾದಿ ಪರವಾಗಿ

2. O.S.189/2014 ರ Judgment and Decree ಕಾಪಿಯನ್ನು ಹಾಜರು ಮಾಡಿದ್ದು ನಿ.ಡಿ.1 ಮತ್ತು 2 ಎಂದು ಗುರುತಿಸಲಾಯಿತು. ಹೊರನಾಡು ಗ್ರಾಮದ ಸರ್ವೆ ನಂಬರ್ 12/5 ರ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಡಿ.3 ಎಂದು ಗುರುತಿಸಲಾಯಿತು, ಮುಟೇಷನ್ ಸಂಖ್ಯೆ ಹೆಚ್.17/2011-12 ನ್ನು ಹಾಜರು ಮಾಡಿದ್ದು ನಿ.ಡಿ.4 ಎಂದು ಗುರುತಿಸಲಾಯಿತು, ಹೊರನಾಡು ಗ್ರಾಮ ಪಂಚಾಯಿತಿಯಿಂದ ನೀಡಿದ ನಮೂನೆ 9 ನ್ನು ಹಾಜರು ಮಾಡಿದ್ದು ನಿ.ಡಿ.5 ಎಂದು ಗುರುತಿಸಲಾಯಿತು, ಹೊರನಾಡು ಗ್ರಾಮ ಪಂಚಾಯಿತಿಯಿಂದ ನೀಡಿದ ನಮೂನೆ 11 ನ್ನು ಹಾಜರು ಮಾಡಿದ್ದು ನಿ.ಡಿ.6 ಎಂದು ಗುರುತಿಸಲಾಯಿತು, ದಿಃ 02.11.2011 ನೇ ಇಸವಿಯ ದಾನ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.7 ಎಂದು ಗುರುತಿಸಲಾಯಿತು, ಭೂ ಪರಿವರ್ತನೆಯ ಆದೇಶವನ್ನು ಹಾಜರು ಮಾಡಿದ್ದು ನಿ.ಡಿ.8 ಎಂದು ಗುರುತಿಸಲಾಯಿತು, ಏಕ ನಿವೇಶನದ ನಕ್ಷೆಯನ್ನು ಹಾಜರು ಮಾಡಿದ್ದು ನಿ.ಡಿ.9 ಎಂದು ಗುರುತಿಸಲಾಯಿತು, ವಿನ್ಯಾಸ ನಕ್ಷೆಯ ತಾಂತ್ರಿಕ ಅನುಮೋದನೆಯನ್ನು ಹಾಜರು ಮಾಡಿದ್ದು ನಿ.ಡಿ.10 ಎಂದು ಗುರುತಿಸಲಾಯಿತು, ಮ್ಯುಟೇಷನ್ ಪ್ರತಿಯನ್ನು ಹಾಜರು ಮಾಡಿದ್ದು ನಿ.ಡಿ.11 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿಃ 27.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಮುಂದಮರೆದ ಮುಖ್ಯ ವಿಚಾರಣೆಃ ಶ್ರೀ ಜಿ.ಬಿ.ವಿ., ವಕೀಲರಿಂದ ಪ್ರತಿವಾದಿ ಪರವಾಗಿ</u>

3. ದಿಃ 02.09.2024 ರಂದು ನಾನು ನೀಡಿರುವ ಭಾರತೀಯ ಸಾಕ್ಷಿ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ನೀಡಿರುವ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ನಿ.ಡಿ.12 ಎಂದು ಗುರುತಿಸಲಾಯಿತು.
4. ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

<u>ಪಾಟೀ ಸವಾಲು ಶ್ರೀ ಎಂ.ಎಸ್.ಜಿ ವಕೀಲರಿಂದ ವಾದಿ ಪರವಾಗಿ</u>

5. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 23.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಂ.ಎಸ್.ಜಿ ವಕೀಲರಿಂದ ವಾದಿ ಪರವಾಗಿ

6. ವಾದಿಯು ನನ್ನ ಮಾವನಾಗಿರುತ್ತಾರೆ. ದಾವ ಆಸ್ತಿಯು ವಾದಿಗೆ ಸೇರಿರುವ ಜಮೀನು ಎಂದರೆ ಸರಿ. ದಾವ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯಲ್ಲಿ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ದಾವ ಆಸ್ತಿಯಲ್ಲಿ ಇರುವ ರಸ್ತೆಯು ವಾದಿಯ ಖಾಸಗಿ ರಸ್ತೆ ಆಗಿರುತ್ತದೆ ಎಂದರೆ ಸರಿ. ದಾವ ಆಸ್ತಿಯಲ್ಲಿ ನನಗೆ ರಸ್ತೆ ಬಿಟ್ಟಿರುತ್ತಾರೆ ಎನ್ನುವ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ. ದಾವ ಆಸ್ತಿಯು ವಾದಿಗೆ ಅವರ ಕುಟುಂಬದಲ್ಲಿ ಆದ ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿ. ನನಗೆ 3 ಗುಂಟೆ ಆಸ್ತಿಯನ್ನು ಧಾನ ಪತ್ರದ ಮೂಲಕ ನೀಡಿರುತ್ತಾರೆ. ನನಗೆ ನೀಡಿರುವ ಧಾನಪತ್ರದಲ್ಲಿ ಸದರಿ 3 ಗುಂಟೆ ಆಸ್ತಿಯನ್ನು ಚೆನ್ನಾಗಿ ನೋಡಿಕೊಂಡು ಅದರ ಜೊತೆಗೆ ವಾದಿಗೆ ಸೇರಿದ ಜಮೀನನ್ನು ನೋಡಿಕೊಳ್ಳಬೇಕು ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನನಗೆ ನೀಡಿರುವ ಧಾನ ಪತ್ರವನ್ನು ರದ್ದು ಮಾಡುವಂತೆ ವಾದಿಯು ಮೂಡಿಗೆರೆ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವ ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವೆಯು ವಜಾ ಆದ ನಂತರ ವಾದಿಯು ಇದೇ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನನಗೆ ನೋಟೀಸು ಜಾರಿಯಾಗಿರುತ್ತದೆ ಎಂದರೆ ಸರಿ. ನನ್ನ ಪರವಾಗಿ ಸದರಿ ಮೇಲ್ಮನವಿಯಲ್ಲಿ ವಕೀಲರನ್ನು ನೇಮಕ ಮಾಡಿರುತ್ತೇನೆ ಎಂದರೆ ಸರಿ. ವಾದಿಯು ನನ್ನ ತಾಯಿಯ ತಮ್ಮನಾಗಿರುತ್ತಾರೆ. ವಾದಿಯು ಮಂಗಳೂರಿನಲ್ಲಿ ವಾಸವಾಗಿದ್ದು ಹೊರನಾಡಿಗೆ ಬಂದು ಹೋಗುತ್ತಿರುತ್ತಾರೆ. ನಾನು ವಾದಿಯ ತಂಗಿಯ ಮಗನಾಗಿರುವುದರಿಂದ ದಾವ ಆಸ್ತಿಗಳನ್ನು ನೋಡಿಕೊಳ್ಳುವ ಉದ್ದೇಶದಿಂದ ವಾದಿಯು ನನಗೆ 3 ಗುಂಟೆ ಜಮೀನನ್ನು ದಾನ ಪತ್ರದ ಮೂಲಕ ನೀಡಿದ್ದರು ಎಂದರೆ ಸರಿಯಲ್ಲ. ವಾದಿಯು

ಅವರಿಗೆ ಸೇರಿದ ಜಮೀನನ್ನು ನಾನು ನೋಡಿಕೊಳ್ಳುತ್ತೇನೆ ಎನ್ನುವ ಪ್ರೀತಿ ಮತ್ತು ವಾತ್ಸಲ್ಯದಿಂದ ನನಗೆ 3 ಗುಂಟೆ ಜಮೀನನ್ನು ದಾನವಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಅವರಿಗೆ ಸೇರಿದ ಜಮೀನನ್ನು ನಾನು ನೋಡಿಕೊಳ್ಳುತ್ತೇನೆ ಎನ್ನುವ ಉದ್ದೇಶದಿಂದ ದಾನ ಪತ್ರ ಮಾಡಿಕೊಟ್ಟಿದ್ದರು ಸಹ ನಾನು ವಾದಿಗೆ ಸೇರಿದ ಜಮೀನನ್ನು ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ನಂಬಿಕೆಗೆ ನಾನು ದ್ರೋಹ ಮಾಡಿದ ಕಾರಣ ವಾದಿಯು ನನಗೆ ಬರೆದುಕೊಟ್ಟಿರುವ ದಾನಪತ್ರವನ್ನು ರದ್ದು ಮಾಡಲು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ.

7. ವಾದಿಯು ನನಗೆ ದಾನವಾಗಿ ನೀಡಿರುವ 3 ಗುಂಟೆ ಜಮೀನು ತರಿ ಜಮೀನು ಆಗಿರುತ್ತದೆ. ವಾದಿಯು ದಾನವಾಗಿ ನೀಡಿರುವ 3 ಗುಂಟೆ ಜಮೀನಿನಲ್ಲಿ ನಾನು ಬೆಳೆ ಬೆಳೆದಿರುವುದಿಲ್ಲ, ಮನೆ ಕಟ್ಟಿರುತ್ತೇನೆ. ಸದರಿ ಆಸ್ತಿಯಲ್ಲಿ ಮನೆ ಕಟ್ಟಲು ನಾನು ಪರವಾನಿಗೆ ಪಡೆದುಕೊಂಡಿರುತ್ತೇನೆ. ಸದರಿ 3 ಗುಂಟೆ ಜಮೀನು ತರಿ ಜಮೀನು ಆಗಿರುವುದರಿಂದ ನಾನು ಮನೆ ಕಟ್ಟಲು ಸದರಿ ಜಮೀನನ್ನು ಭೂ ಪರಿವರ್ತನೆ ಮಾಡಿರುತ್ತೇನೆ ಎಂದರೆ ಸರಿ. ಭೂ ಪರಿವರ್ತನೆ ಮಾಡಿದ ಬಗ್ಗೆ ನಾನು ದಾಖಲಾತಿ ಮತ್ತು ಮನೆ ಕಟ್ಟಲು ಪಡೆದುಕೊಂಡಿರುವ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನಾನು ವಾದಿಗೆ ಸೇರಿದ ಜಮೀನಿಗೆ ಅಕ್ರಮ ಪ್ರವೇಶ ಮಾಡುತ್ತೇನೆ ಎಂದು ನನ್ನ ವಿರುದ್ಧ ವಾದಿಯು ಕಳಸ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದೂರನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣವು ಸಿವಿಲ್ ಸ್ವರೂಪದ ಪ್ರಕರಣವಾಗಿರುವುದರಿಂದ ನ್ಯಾಯಾಲಯದಲ್ಲಿ ಇತ್ಯರ್ಥ ಮಾಡಿಕೊಳ್ಳುವಂತೆ ಪೊಲೀಸರು ವಾದಿಗೆ ಹಿಂಭರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮನೆ ಕಟ್ಟಿರುವ ಜಾಗವು ನನಗೆ ದಾನ ಪತ್ರದಲ್ಲಿ ನೀಡಿರುವ 3 ಗುಂಟೆ ಜಮೀನಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ 3 ಗುಂಟೆ ಆಸ್ತಿಯಲ್ಲಿ ಮನೆ ಕಟ್ಟಿರುತ್ತೇನೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ನೀಡಲಾಗಿದೆ)
(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 16.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಂ.ಎಸ್.ಜಿ ವಕೀಲರಿಂದ ವಾದಿ ಪರವಾಗಿ

8. ನನ್ನ ವಿರುದ್ಧ ವಾದಿಯು ಈ ದಾವೆಯನ್ನು ಹೊರತುಪಡಿಸಿ O.S.189/2014 ರಂತೆ ಮೂಡಿಗೆರೆಯ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯು ನನಗೆ ನೀಡಿರುವ ದಾನ ಪತ್ರವನ್ನು ರದ್ದು ಮಾಡುವಂತೆ ಕೋರಿರುತ್ತಾರೆ ಎಂದರೆ ಸರಿ. ವಾದಿಯು ನನ್ನ ತಾಯಿಯ ಸ್ವಂತ ತಮ್ಮ ಎಂದರೆ ಸರಿ. ನಾನು ಮೊದಲು ಹೊರನಾಡಿನ ಮಣಿಪಾಲ್

ಮನೆಯಲ್ಲಿ ವಾಸವಾಗಿದ್ದೇನು. ದಾನ ಪತ್ರದಲ್ಲಿ ತೋರಿಸಿರುವ ಆಸ್ತಿಯು ವಾದಿಗೆ ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾನ ಪತ್ರವನ್ನು ಮಾಡುವ ಪೂರ್ವದಲ್ಲಿ ದಾಖಲಾತಿಯನ್ನು ವಕೀಲರಿಗೆ ತೋರಿಸಿಯೇ ನಾನು ದಾನ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯು ಅವರ ವಕೀಲರಿಗೆ ದಾಖಲಾತಿಯನ್ನು ನೀಡಿ ನನ್ನ ಹೆಸರಿಗೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಡಿ.7 ರ ಪ್ರಕಾರ ಆಸ್ತಿಯ ಯಾವ ದಿಕ್ಕಿಗೂ ರಸ್ತೆ ಇರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ್ 12/3 ರಲ್ಲಿ ಒಟ್ಟು 32 ಗುಂಟೆಯಲ್ಲಿ 3 ಗುಂಟೆ ಆಸ್ತಿಗೆ ಮಾತ್ರ ನನಗೆ ವಾದಿಯು ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನಗೆ 3 ಗುಂಟೆ ಆಸ್ತಿಯನ್ನು ದಾನ ಪತ್ರ ಮಾಡಿಕೊಟ್ಟ ನಂತರ ಸರ್ವೆ ನಂಬರ್ 12/3 ರಲ್ಲಿ 29 ಗುಂಟೆ ಆಸ್ತಿಯನ್ನು ವಾದಿಯೇ ಉಳಿಸಿಕೊಂಡು ಅವರ ಸ್ವಾಧೀನವೇ ಇರುತ್ತದೆ ಎಂದರೆ ಸರಿ. ಸದರಿ 29 ಗುಂಟೆ ಆಸ್ತಿಗೆ ವಾದಿಯೇ ಮಾಲೀಕರು ಎಂದರೆ ಸರಿ. ದಾನ ಪತ್ರದಲ್ಲಿ ಸರ್ವೆ ನಂಬರ್ 12/3 ರಲ್ಲಿ ಇರುವ 29 ಗುಂಟೆ ಆಸ್ತಿಯಲ್ಲಿ ರಸ್ತೆ ಇರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ದಾನವಾಗಿ ನೀಡಿರುವ 3 ಗುಂಟೆ ಆಸ್ತಿಯನ್ನು ಮಧ್ಯದಲ್ಲಿ ಇರುವುದರಿಂದ 29 ಗುಂಟೆಯಲ್ಲಿಯೇ ಹಾದು ಹೋಗಬೇಕು ಎಂದು ಬರೆಸಿರುತ್ತೇನೆ ಎಂದು ವಾದಿಯು ನನಗೆ ತಿಳಿಸಿರುತ್ತಾರೆ. 29 ಗುಂಟೆಯಲ್ಲಿ ನನಗೆ ಓಡಾಡಲು ರಸ್ತೆ ಇದೆ ಎಂದು ಯಾವುದೇ ದಾಖಲಾತಿಯನ್ನು ವಾದಿಯು ನನಗೆ ಮಾಡಿಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು 29 ಗುಂಟೆಯಲ್ಲಿ ಓಡಾಡಲು ರಸ್ತೆ ಇದೆ ಎಂದು ನನಗೆ ವಾದಿಯು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಒಪ್ಪಿಗೆ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನಾನು ಹಾಜರು ಮಾಡಿರುವ ದಾಖಲಾತಿಗಳಲ್ಲಿ ಸದರಿ ಒಪ್ಪಿಗೆ ಪತ್ರವು ಇರುವುದಿಲ್ಲ. ಆ ರೀತಿ ಯಾವುದೇ ಒಪ್ಪಿಗೆ ಪತ್ರ ಇರದೇ ಇದ್ದರು ಸಹ ನಾನು ಒಪ್ಪಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 12/3 ರಲ್ಲಿ

ಇರುವ ಒಟ್ಟು 32 ಗುಂಟೆ ಆಸ್ತಿಯಿಂದ 2 ½ ಕಿ.ಮೀ ದೂರದಲ್ಲಿ ನಾನು ವಾಸವಾಗಿರುವ ಮನೆ ಮತ್ತು ಜಮೀನು ಇರುತ್ತದೆ. ಸದರಿ ದಾವ ಆಸ್ತಿಯಲ್ಲಿ ನಾನು ಅಕ್ರಮ ಪೈಪು ಅಳವಡಿಸಲು ಪ್ರಯತ್ನಪಟ್ಟಿರುತ್ತೇನೆ ಎಂದು ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ನನಗೆ ನೀಡಿರುವ ಕಟ್ಟಡ ಪರವಾನಿಗೆಯ ಬಾಬ್ತು ಮೇಲ್ಮನವಿ ದಾಖಲಾಗಿರುವ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ಮೇಲ್ಮನವಿಯಲ್ಲಿ ಗ್ರಾಮ ಪಂಚಾಯಿತಿಯ ಠರಾವಿಗೆ ತಡೆಯಾಜ್ಞೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಭೂ ಪರಿವರ್ತನೆ ಆಗುವ ಪೂರ್ವದಲ್ಲಿ ಆಸ್ತಿಯನ್ನು ಸರ್ವೆ ಮಾಡಿರುತ್ತಾರೆ. ಸದರಿ ಸರ್ವೆ ಸಮಯದಲ್ಲಿ ವಾದಿಗೆ ನೋಟೀಸು ನೀಡಿರುತ್ತಾರೆ. ನನಗೆ ದಾನ ಪತ್ರದಲ್ಲಿ ನೀಡಿರುವ 3 ಗುಂಟೆ ಆಸ್ತಿಯು ದಾವ ದಿಕ್ಕಿನ ಪಶ್ಚಿಮ ದಿಕ್ಕಿಗೆ ಇರುತ್ತದೆ. ನನಗೆ ದಾನ ಪತ್ರದ ಮೂಲಕ ಬಂದಿರುವ 3 ಗುಂಟೆ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ವಾದಿಯ ಅಣ್ಣ ಶಾಂತರಾಜ್ ಹೆಗ್ಗಡೆ ರವರ ಆಸ್ತಿ ಇರುತ್ತದೆ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ವಾದಿಗೆ ಸೇರಿದ ಉಳಿಕೆ ಜಮೀನು ಇರುತ್ತದೆ. ನಾನು ಭೂ ಪರಿವರ್ತನೆ ಮಾಡುವ ಸಮಯದಲ್ಲಿ ನಕಲಿ ದಾಖಲೆಗಳನ್ನು ಕಂದಾಯ ಇಲಾಖೆಗೆ ಸಲ್ಲಿಸಿ ಭೂ ಪರಿವರ್ತನೆ ಆದೇಶವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಭೂ ಪರಿವರ್ತನೆ ಆಗುವ ಸಮಯದಲ್ಲಿ ಯಾವುದೇ ಸರ್ವೆ ಆಗಿರುವುದಿಲ್ಲ ಮತ್ತು ವಾದಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸರ್ವೆ ಅಧಿಕಾರಿಗಳು ಶಾಮೀಲ್ ಆಗಿ ಭೂ ಪರಿವರ್ತನೆ ಆದೇಶವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

(ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ, ಸಮಯಾವಕಾಶ ನೀಡಲಾಗಿದೆ.)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.೯.ಎ.ಒ.

ದಿಃ 05.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಎಂ.ಕೆ.ಎಸ್. ವಕೀಲರಿಂದ ವಾದಿ ಪರವಾಗಿ

9. ವಾದಿ 2014 ರಲ್ಲಿ ದಾವೆಯನ್ನು ಸಲ್ಲಿಸಿದ ಬಳಿಕ ನಾನು 3 ಗುಂಟೆಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಖಾತೆಯನ್ನು ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಮೊದಲೇ ನನ್ನ ಹೆಸರಿಗೆ ಖಾತೆಯಾಗಿತ್ತು ಎಂದು ನುಡಿಯುತ್ತಾರೆ. ನಿ.ಡಿ.8 ಭೂ ಪರಿವರ್ತನಾ ಆದೇಶವನ್ನು ಪಿ.ಡಿ.ಒ ಮತ್ತು ತಹಶೀಲ್ದಾರ್ ರವರ ಜೊತೆ ಸೇರಿಕೊಂಡು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.9 ನಕ್ಷೆಯನ್ನು ನ್ಯಾಯಾಲಯದಲ್ಲಿ ದಾವೆ ವಿಚಾರಣೆಯಲ್ಲಿ ಇದ್ದಾಗ ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಮೊದಲೇ ಮಾಡಿಸಿಕೊಂಡಿರುತೇನೆ ಎಂದು ನುಡಿಯುತ್ತಾರೆ. ನಿ.ಡಿ.10 ವಿನ್ಯಾಸದ ನಕ್ಷೆಯನ್ನು ನ್ಯಾಯಾಲಯದಲ್ಲಿ ದಾವೆ ವಿಚಾರಣೆಯಲ್ಲಿ ಇದ್ದಾಗ ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಮೊದಲೇ ಮಾಡಿಸಿಕೊಂಡಿರುತೇನೆ ಎಂದು ನುಡಿಯುತ್ತಾರೆ.

10. ವಾದಿ ಈ ದಾವೆಯನ್ನು ತನಗೆ ಸೇರಿದ 29 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದಾರೆ ಎಂದರೆ ಸರಿ. 29 ಗುಂಟೆಗೆ ಸಂಬಂಧಿಸಿದಂತೆ ನಿಮಗೆ ಯಾವುದೇ ತಕರಾರು ಇಲ್ಲ ಎಂದರೆ ಸಾಕ್ಷಿ ರಸ್ತೆಯನ್ನು ಬಿಡುವುದನ್ನು ಹೊರತು ಪಡಿಸಿ ಬೇರೆ ವಿಚಾರದಲ್ಲಿ ನನಗೆ ತಕರಾರು ಇಲ್ಲ ಎಂದು ನುಡಿಯುತ್ತಾರೆ. ವಾದಿಯ ಕುಟುಂಬಕ್ಕೆ ಸೇರಿದ 32 ಗುಂಟೆ ಆಸ್ತಿಯಲ್ಲಿ ನಿಮಗೆ ರಸ್ತೆ ಬಿಡಬೇಕು ಎಂಬ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯಾ ಎಂದರೆ ಸಾಕ್ಷಿ ಒಪ್ಪಿಗೆ ಪತ್ರವನ್ನು ಎಲ್ಲಾ ಇಲಾಖೆಯವರು ನೀಡಿದ್ದಾರೆ ಎಂದು ನುಡಿಯುತ್ತಾರೆ. ಆ ಒಪ್ಪಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸಾಕ್ಷಿಗೆ ತಾನು ಹಾಜರು ಪಡಿಸಿರುವ ಡಿ ಸಿರೀಸ್ ನ ದಾಖಲೆಯನ್ನು ತೋರಿಸಿ ಆ ದಾಖಲೆಯಲ್ಲಿ ಆ ಒಪ್ಪಿಗೆ ಪತ್ರ ಇದೆಯಾ ಎಂದು ಕೇಳಲಾಗಿ ಸಾಕ್ಷಿ ದಾಖಲೆಗಳನ್ನು ನೋಡಿ ಆ ಒಪ್ಪಿಗೆ ಪತ್ರ ಇಲ್ಲ ಎಂದು ನುಡಿಯುತ್ತಾರೆ. ವಾದಿ ಆ ರೀತಿಯ ಯಾವುದೇ

ಒಪ್ಪಿಗೆ ಪತ್ರವನ್ನು ನನಗೆ ನೀಡಿಲ್ಲ, ಆ ಕಾರಣದಿಂದಲೇ ನಾನು ಆ ಒಪ್ಪಿಗೆ ಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

11. ಸಾಕ್ಷಿಗೆ O.S.189/2014 ರ ಸಾಕ್ಷಿಯ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಮತ್ತು ಪಾಟೀ ಸವಾಲಿನ ದೃಢೀಕೃತ ನಕಲನ್ನು ತೋರಿಸಿ ಕೇಳಲಾಗಿ ಸಾಕ್ಷಿ ಆ ದಾಖಲೆಯ ಪ್ರಕಾರ O.S.189/2014 ರಲ್ಲಿ ಸಾಕ್ಷ್ಯ ನುಡಿದಿದ್ದೇನೆ ಎಂದು ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿ.ಪಿ.5 ಎಂದು ಗುರುತಿಸಲಾಯಿತು. ದಾವ ಸ್ವತ್ತು ವಾದಿಗೆ ದಿಃ 18.05.2001 ರ ವಿಭಾಗ ಪತ್ರದಂತೆ ಬಂದಿರುತ್ತದೆ ಎಂದರೆ ಸರಿ. ಆ ವಿಭಾಗ ಪತ್ರ 24 ವರ್ಷಗಳ ಹಿಂದೆ ಆಗಿತ್ತು ಎಂದರೆ ಸರಿ. ವಾದಿಯ ದಾವ ಸ್ವತ್ತಿನ 29 ಗಂಟೆ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಆ ಆಸ್ತಿಯ ಮೇಲೆ ನನಗೆ ಓಡಾಡುವ ಹಕ್ಕು ಇದೆ ಎಂದು ನುಡಿಯುತ್ತಾರೆ. ಆ ರೀತಿ ದಾವ ಸ್ವತ್ತಿನ ಮೇಲೆಓಡಾಡುವ ಹಕ್ಕನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ವಾದಿ ನನಗೆ 3 ಗುಂಟೆ ಜಮೀನನ್ನು ದಾನ ಪತ್ರದ ಮೂಲಕ ನೀಡಿದ ಬಳಿಕ ನಾನು ವಾದಿಗೆ ಸೇರಿದ 29 ಗುಂಟೆ ಜಮೀನಿಗೆ ತೊಂದರೆ ನೀಡಿದ ಕಾರಣ ವಾದಿ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ 29 ಗುಂಟೆ ಜಮೀನಿನ ಸ್ವಾಧೀನಕ್ಕೆ ನಾನು ತೊಂದರೆ ಮಾಡಿದ್ದರಿಂದ ವಾದಿ ನನಗೆ ಬರೆದುಕೊಟ್ಟ 3 ಗುಂಟೆ ಜಮೀನಿನ ದಾನ ಪತ್ರದ ರದ್ದತಿಗಾಗಿ ದಾವೆಯನ್ನು ನನ್ನ ಮೇಲೆ ಹಾಕಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ